ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ ದ್ವಿದಸ/345/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ: 18/07/2023

## ಆದೇಶ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗೊಳಿಸಿ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ:
1. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ: ಕ.ಲೋ.ಸೇ.ಆ/ 461/ಪ.ಶಾ(3)/2022-23/4674-4703, ದಿನಾಂಕ:23.01.2023.
2. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನ ದಿನಾಂಕ:04.07.2023.

******

ಕಾಲೇಜು ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಉಲ್ಲೇಖ-(01) ರಂತೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಯಾಗಿರುವ 21 ಅಭ್ಯರ್ಥಿಗಳಲ್ಲಿ 11 ಅಭ್ಯರ್ಥಿಗಳ ವಿದ್ಯಾರ್ಹತೆ, ಮೀಸಲಾತಿ ಸಂಬಂಧಿತ ಪ್ರಮಾಣ ಪತ್ರಗಳ ನೈಜತೆ ವರದಿಗಳು ಹಾಗೂ ಪ್ರಮಾಣ ಪತ್ರಗಳು ಸಕ್ಷಮ ಪ್ರಾಧಿಕಾರಗಳಿಂದ ಸ್ವೀಕೃತವಾಗಿರುತ್ತವೆ. ಸದರಿ ಪ್ರಮಾಣ ಪತ್ರಗಳು ಹಾಗೂ ವರದಿಗಳು ಕ್ರಮಬದ್ಧವಾಗಿರುವ ಹಿನ್ನೆಲೆಯಲ್ಲಿ, ಸಂಬಂಧಿಸಿದ ಅಭ್ಯರ್ಥಿಗಳಿಗೆ ಉಲ್ಲೇಖ-(02) ರಂತೆ ಆನ್‌ಲೈನ್ ಮೂಲಕ ಸ್ಥಳ ಆಯ್ಕೆ ಕೌನ್ಸಲಿಂಗ್ ನಡೆಸಲಾಗಿದ್ದು, ಅಭ್ಯರ್ಥಿಗಳು ಅವರ ಹೆಸರಿನ ಮುಂದೆ ಕಾಲಂ-6 ರಲ್ಲಿ ತಿಳಿಸಿರುವ ಕಛೇರಿ/ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಅದರನ್ವಯ ಸ್ಥಳ ಆಯ್ಕೆ ಮಾಡಿಕೊಂಡಿರುವ ಕಛೇರಿ/ ಕಾಲೇಜುಗಳಲ್ಲಿ ಖಾಲಿ ಇರುವ **ದ್ವಿತೀಯ ದರ್ಜೆ ಸಹಾಯಕರ** ಹುದ್ದೆಯ ಎದುರಾಗಿ **ವೇತನ ಶ್ರೇಣಿ: ರೂ.21400-500-22400-550-24600-600-27000-650-29600-750-32600-850-36000-950-39800-1100-42000 ರಲ್ಲಿ** ಷರತ್ತುಗಳಿಗೆ ಒಳಪಟ್ಟಂತೆ ನೇಮಕಾತಿ ನೀಡಿ, ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಕೆ.ಪಿ.ಎಸ್.ಸಿ ಕ್ರ.ಸಂ | ಹೆಸರು (ಶ್ರೀ/ಶ್ರೀಮತಿ) | ಜನ್ಮ ದಿನಾಂಕ | ಆಯ್ಕೆ ಹೊಂದಿದ ಮೀಸಲಾತಿ | ಕೌನ್ಸಲಿಂಗ್ ನಲ್ಲಿ ಆಯ್ಕೆ ಮಾಡಿಕೊಂಡಿರುವ ಕಛೇರಿ/ಕಾಲೇಜು |
|---|---|---|---|---|---|
| 1 | 2 | ವೀರಭದ್ರಪ್ಪ | 01-06-1997 | GM/2A | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ, ಕೊಪ್ಪಳ |
| 2 | 3 | ಹೆಬ್ಬಟದ ರಾಘವೇಂದ್ರ | 01-06-1992 | GM/CAT1/RL | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಂಪ್ಲಿ, ಬಳ್ಳಾರಿ |
| 3 | 4 | ವೀರೇಶಸ್ವಾಮಿ | 15-07-1992 | 3B | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಲಬುರಗಿ |
| 4 | 5 | ಕವಿರಾಜ ಬಿ | 01-06-1994 | GM/CAT1/RL | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರುಗೋಡು, ಬಳ್ಳಾರಿ |
| 5 | 7 | ದೇವಿಂದ್ರಪ್ಪ | 01-06-1999 | 2A | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಹಾಪುರ, ಯಾದಗಿರಿ |

| | | | | | |
|---|---|---|---|---|---|
| 6 | 9 | ಅಂಬ್ರೀಶ | 18-05-1997 | ST | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿಂಧನೂರು, ರಾಯಚೂರು |
| 7 | 10 | ನೀಲಮ್ಮ ಚಿಕ್ಕನಳ್ಳಿ | 02-07-1989 | GM/3A/W | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ, ಕಲಬುರಗಿ |
| 8 | 11 | ಹನುಮಪ್ಪ | 01-06-1993 | SC/RL | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಾವರಗೇರಿ, ಕೊಪ್ಪಳ |
| 9 | 13 | ಪವನರೆಡ್ಡಿ | 09-09-1996 | 3A | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಲಬುರಗಿ |
| 10 | 15 | ಅಲೀಂ | 15-07-1995 | 2B | ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಲಬುರಗಿ |
| 11 | 20 | ಜಯಸೂರ್ಯ | 05-02-1996 | GM/PH-BI | ಸರ್ಕಾರಿ ಕಾಲೇಜು, ಕಲಬುರಗಿ |

**ಷರತ್ತುಗಳು:**

1. ಮೇಲೆ ತಿಳಿಸಿರುವ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸ್ಥಳ ನಿಯುಕ್ತಿ ಆದೇಶವನ್ನು ಡೌನ್‌ಲೋಡ್ ಮಾಡಿಕೊಂಡು ಆದೇಶವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜಿನ ಅಧಿಕಾರಿ/ ಪ್ರಾಂಶುಪಾಲರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ತಪ್ಪಿದಲ್ಲಿ ಅಭ್ಯರ್ಥಿಗಳ ನೇಮಕಾತಿ ಆದೇಶವು ತಂತಾನೇ ರದ್ದಾಗುತ್ತದೆ.
2. ಅಭ್ಯರ್ಥಿಗಳು ಸ್ಥಳನಿಯುಕ್ತಿಗೊಳಿಸಿದ ಕಛೇರಿ/ಕಾಲೇಜಿನ ಅಧಿಕಾರಿ/ಪ್ರಾಂಶುಪಾಲರ ಸಮಕ್ಷಮದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ತಮ್ಮ ವಿದ್ಯಾರ್ಹತೆ ಹಾಗೂ ಆಯ್ಕೆ ಹೊಂದಿದ ಮೀಸಲಾತಿಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.
3. ಇದು ಸ್ಪರ್ಧಾತ್ಮಕ ಪರೀಕ್ಷೆಯ ಆಧಾರದ ಮೇಲೆ ಮಾಡಿರುವ ನೇರ ನೇಮಕಾತಿಯಾಗಿರುವುದರಿಂದ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 5ರ ಅನುಸಾರ ಕರ್ನಾಟಕ ಲೋಕಸೇವಾ ಆಯೋಗವು ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿನ ಜ್ಯೇಷ್ಠತೆಯು ಅಂತಿಮವಾಗಿರುತ್ತದೆ. ಯಾವುದೇ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನಾಧರಿಸಿ ಜ್ಯೇಷ್ಠತೆಯನ್ನು ಕ್ಲೇಮು ಮಾಡುವ ಹಕ್ಕುಳ್ಳವನಾಗಿರುವುದಿಲ್ಲ.
4. ಸದರಿ ಅಭ್ಯರ್ಥಿಯನ್ನು ನೇರ ನೇಮಕಾತಿ ನಿಯಮಗಳ ನಿಬಂಧನೆಗೊಳಪಟ್ಟಿರುವರೆಂಬ ಷರತ್ತಿನ ಮೇಲೆ ನೇಮಕ ಮಾಡಲಾಗಿದೆ. 1977ರ ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳ 5ನೇ ನಿಯಮದ ಪ್ರಕಾರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಸೇವಾಪೂರ್ವ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ (ಪ್ರೊಬೇಷನರಿ ಪೀರಿಯಡ್). ಈ ಸೇವಾ ಪೂರ್ವ ಅವಧಿಯಲ್ಲಿ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗತಕ್ಕದ್ದು.
5. ಎರಡು ವರ್ಷಗಳ ಸೇವಾ ಪೂರ್ವ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಈ ಕಛೇರಿಯಿಂದ ಘೋಷಿಸಲ್ಪಡದ ಹೊರತು ಸೇವಾ ಪೂರ್ವ ಅವಧಿಯ ನಂತರದ ವಾರ್ಷಿಕ ವೇತನ ಬಡ್ತಿಯನ್ನು ಸದರಿಯವರಿಗೆ ಮಂಜೂರು ಮಾಡುವಂತಿಲ್ಲ.
6. ಸೇವಾ ಪೂರ್ವ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಈ ಕಛೇರಿಯಿಂದ ಘೋಷಿಸಲ್ಪಡದ ಹೊರತು ಇಲಾಖಾ ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.
7. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:43:ಸೇವನೆ:2008, ದಿನಾಂಕ:07.03.2012ರಲ್ಲಿ ಜಾರಿಗೊಳಿಸಿರುವ "ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012" ಹಾಗೂ ಸದರಿ ನಿಯಮಗಳಿಗೆ ಸರ್ಕಾರವು ಕಾಲಕಾಲಕ್ಕೆ

ಹೊರಡಿಸಿರುವ ತಿದ್ದುಪಡಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ.

8. ದಿನಾಂಕ:31-03-2006ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ (ವಿಶೇಷ) 04 ಪಿಇಟಿ 2005ರ ಪ್ರಕಾರ ದಿನಾಂಕ:01-04-2006ರ ನಂತರ ನೇಮಕಾತಿ ಹೊಂದಿದವರಿಗೆ ನಿಯಮಾನುಸಾರ ನೂತನ ಪಿಂಚಣಿ ಯೋಜನೆ ಅನ್ವಯಿಸುವುದು.
9. ಈಗಾಗಲೇ ಸರ್ಕಾರಿ ನೌಕರಿಯಲ್ಲಿರುವ ಸಿಬ್ಬಂದಿಗಳು ಕೆ.ಸಿ.ಎಸ್.ಆರ್ ನಿಯಮ 252(ಬಿ)ರನ್ವಯ ಸೇವೆಯಿಂದ ಬಿಡುಗಡೆ ಹೊಂದಿ, ಸ್ಥಳ ಆಯ್ಕೆ ಕೌನ್ಸಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಕಛೇರಿ/ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು.
10. ಕರ್ತವ್ಯಕ್ಕೆ ಹಾಜರಾಗಲು ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.
11. ಮೇಲೆ ತಿಳಿಸಿರುವ ಅಭ್ಯರ್ಥಿಯ ನೇಮಕಾತಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಹಾಗೂ ದಾಖಲಾತಿಗಳು ನಕಲಿ ಅಥವಾ ತಪ್ಪು ಎಂದು ಕಂಡು ಬಂದಲ್ಲಿ ಸದರಿ ಅಭ್ಯರ್ಥಿಯ ನೇಮಕಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಕೂಡಲೇ ರದ್ದುಪಡಿಸಲಾಗುವುದು.

**ಆಯುಕ್ತರು**
**ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ,**

1. ಮೇಲ್ಕಂಡ ಅಭ್ಯರ್ಥಿಗಳಿಗೆ-ಅಗತ್ಯ ಕ್ರಮಕ್ಕಾಗಿ.
2. ಸಂಬಂಧಪಟ್ಟ ಕಛೇರಿ/ಕಾಲೇಜುಗಳ ಅಧಿಕಾರಿ/ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-(ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.)
4. ಕಛೇರಿ ಪ್ರತಿ.

**ಆಂತರಿಕ:**

1. ಮ್ಯಾನೇಜರ್/ಅಧೀಕ್ಷಕರು, ವರ್ಗಾವಣೆ/ನಿಯೋಜನೆ ವಿಭಾಗ, ಸೇವಾ ವಿಭಾಗ, ಯೋಜನಾ ಹಾಗೂ ಆಯವ್ಯಯ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಮ್ಯಾನೇಜರ್/ಅಧೀಕ್ಷಕರು, ಬಡ್ತಿ ಮತ್ತು ಸ್ಥಾನೀಕರಣ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಸದರಿಯವರುಗಳ ಹೆಸರನ್ನು ಜೇಷ್ಠತಾ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.
3. ಕಛೇರಿ ಪ್ರತಿ.